# ಮಕ್ಕಳ ನೆನಕೆಯಲ್ಲಿ ಹೆತ್ತವರ ಕನವರಿಕೆ



■ ಉಮಾ ಅನಂತ್

ಸರೋಜಮ್ಮನಿಗೆ ವಯಸ್ಸು 65ರ ಆಜುಬಾಜು. ಸಂಜೆ ಹೊತ್ತು ಪಾರ್ಕ್‌ನಲ್ಲಿ ವಾಕ್ ಮಾಡುವುದು ಅಜ್ಜಿಯ ಪ್ರೀತಿಯ ಹವ್ಯಾಸ. ತಮ್ಮ ಸಮಾನ ಮನಸ್ಕರೊಂದಿಗೆ ಹರಟುತ್ತಾ ಅಜ್ಜಿ ಹೇಳುತ್ತಿದ್ದುದು ಹೀಗೆ. 'ನಾಳೆಯಿಂದ ವಾಕಿಂಗ್ ಬರಲ್ಲ. ನಾನು ನನ್ನ ಎರಡನೇ ಮಗನ ಮನೆಯಲ್ಲಿ ವಾಸ್ತವ್ಯಕ್ಕೆ ಹೋಗುತ್ತಿದ್ದೇನೆ. ಮೂರು ತಿಂಗಳು ಕಳೆದು ಮತ್ತೊಬ್ಬ ಮಗನ ಮನೆಗೆ. ಹೀಗೆ ಪಾಳಿ ಬದುಕು ನನ್ನದಾಗಿದೆ...'

ಈ ಅಜ್ಜಿಗೆ ನಾಲ್ಕು ಮಕ್ಕಳು. ಎಲ್ಲರೂ ದೊಡ್ಡ ದೊಡ್ಡ ಹುದ್ದೆಯಲ್ಲಿರುವವರು. ಮಕ್ಕಳಿಗೆ ಮದುವೆ ಮಾಡಿದ ಬಳಿಕ ಅಜ್ಜಿಯ ಗಂಡ ಇಹಲೋಕ ತ್ಯಜಿಸಿದರು. ಮಕ್ಕಳಾರೂ ಅಜ್ಜಿಯನ್ನು ನೋಡಿಕೊಳ್ಳುವ ಉಸಾಬರಿ ಬೇಡವೆಂದು ನಿರ್ಧರಿಸಿದರು. ತಮ್ಮ ಮನೆಗಳಲ್ಲಿ ನೋಡಿಕೊಳ್ಳುವ ಬಗ್ಗೆ ಅವರವರಲ್ಲೇ 'ತೋರು ಬೆರಳು'ಗಳು ಕೆಲಸ ಮಾಡಿದವು. ಕೊನೆಗೆ ಎಲ್ಲರೂ ಸೇರಿ ಒಬ್ಬೊಬ್ಬರ ಮನೆಯಲ್ಲಿ ಮೂರು ಮೂರು ತಿಂಗಳು ಇರುವುದು; ಹಾಗೇ ರೊಟೇಷನ್ ಆಗುವುದು ಎಂಬ ತೀರ್ಮಾನಕ್ಕೆ ಬಂದರು. ಅಲ್ಲಿಂದ ಶುರುವಾಯಿತು ಈ 'ಹೆತ್ತಮ್ಮ'ನ ಪಾಳಿಯ ಬದುಕು.

★★★

ಉದ್ಯಮಿ ಅರುಣಾಚಲಂ ಅವರದು ರಿಯಲ್ ಎಸ್ಟೇಟ್ ವಹಿವಾಟು. ಒಂದು ಹೆಣ್ಣು ಹಾಗೂ ಇಬ್ಬರು ಗಂಡು ಮಕ್ಕಳಿದ್ದಾರೆ. ಕೈಯಲ್ಲಿ ಕೋಟ್ಯಂತರ ರೂಪಾಯಿ, ಮಕ್ಕಳಿಗೆಲ್ಲ ಆಸ್ತಿಯಲ್ಲಿ ಪಾಲು ನೀಡಿದ್ದಾಯಿತು. ದೊಡ್ಡ ಬಂಗಲೆ, ಕೈಗೊಬ್ಬ, ಕಾಲಿಗೊಬ್ಬ ಎಂಬಂತೆ ಆಳುಕಾಳು. ಇಷ್ಟಿದ್ದೂ ಅರುಣಾಚಲಂಗೆ ಮಾನಸಿಕ ನೆಮ್ಮದಿ ಇಲ್ಲ. ಮಕ್ಕಳು ಮತ್ತು ತಂದೆ ನಡುವೆ ಇನ್ನಷ್ಟು ಹಣ ಬೇಕು ಎಂದು ದಿನನಿತ್ಯವೂ ಕಾದಾಟ. ಪತ್ನಿಯ ಬೆಂಬಲ ಮಕ್ಕಳ ಕಡೆಗೇ ಹೊರತು ಗಂಡನ ಕಡೆಗಲ್ಲ. ಹೀಗಾಗಿ ಅರುಣಾಚಲಂ ಅಕ್ಷರಶಃ ಒಬ್ಬಂಟಿ. ವಯಸ್ಸು ಎಪ್ಪತ್ತರ ಆಜೂಬಾಜು. ಸಮಾನ ಮನಸ್ಕರ ಹುಡುಕಾಟ, ಭಾವನೆಗಳ ಹಂಚಿಕೆಗೆ, ಪ್ರೀತಿಯ ಆಸರೆಗೆ, ವಾತ್ಸಲ್ಯದ ಸೆಲೆಗಾಗಿ ತಡಕಾಟ... ಎಲ್ಲವೂ ಆಗಿ ಕೊನೆಗೆ ನಿರ್ಧಾರ ಮಾಡಿ ಇಳಿವಯಸ್ಸಿನ ಜೀವನಕ್ಕಾಗಿ ಸೇರಿದ್ದು ವೃದ್ಧಾಶ್ರಮ. ಅಲ್ಲೀಗ ಅರುಣಾಚಲಂಗೆ 'ನೆಮ್ಮದಿ'ಯ ಬದುಕು!

★★★

ಅರುವತ್ತೆರಡರ ಅಜ್ಜನ ಮತ್ತೊಂದು ಕಥೆ ಕೇಳಿ. ಸರ್ಕಾರಿ ನೌಕರಿಯಲ್ಲಿದ್ದ ಇವರಿಗೆ ಪತ್ನಿ ಇಹಲೋಕ ತ್ಯಜಿಸಿ ಐದು ವರ್ಷವಾಗಿದೆ. ಇರುವುದು ಒಬ್ಬಳೇ ಮಗಳು. ಆಕೆಗೆ ಮದುವೆ ಮಾಡಿ ಮಗಳ ಜೊತೆಯಲ್ಲೇ ಇದ್ದರು. ಮಗಳು–ಅಳಿಯ ಇಬ್ಬರೂ ಸಾಫ್ಟ್‌ವೇರ್ ಎಂಜಿನಿಯರ್. ಹಗಲು ರಾತ್ರಿ ದುಡಿತ. ಈ ಮಧ್ಯೆ ಅಪ್ಪನ ಯೋಗಕ್ಷೇಮ ನೋಡಿಕೊಳ್ಳಲೂ ಪುರುಸೊತ್ತಿಲ್ಲ. ಹೀಗಿರುವಾಗ ಮಗಳು ಒಂದು ದಿನ ಅಪ್ಪನನ್ನು ಕರೆದುಕೊಂಡು ಹೋಗಿ ವೃದ್ಧಾಶ್ರಮ ಸೇರಿಸಿ ಕೈತೊಳೆದುಕೊಂಡಳು. ಹೆತ್ತ ಮಗಳಿದ್ದೂ ಇದೀಗ ಅಪ್ಪ ಒಬ್ಬಂಟಿ!

★★★

ಅರುವತ್ತರ ಹರೆಯದ ಗೋವಿಂದರಾಜು ಕಥೆ ಇವರೆಲ್ಲರಿಗಿಂತ ಭಿನ್ನ. ವೃತ್ತಿಯಲ್ಲಿ ಬ್ಯಾಂಕ್ ಉದ್ಯೋಗಿಯಾಗಿದ್ದ ಇವರಿಗೆ ಒಬ್ಬಳೇ ಮಗಳು. ಕೀರ್ತಿಗೊಬ್ಬ ಮಗನಿರಬೇಕು ಎಂದು ಮದುವೆಯಾದ ಹೊಸತರಲ್ಲಿ ಹಪಹಪಿಸಿದರೂ ದೇವರು ದಯಪಾಲಿಸಿದ್ದು ಒಬ್ಬ ಹೆಣ್ಣು ಮಗಳನ್ನು ಮಾತ್ರ. ಮಗುವಿನ ಮೇಲೆ ಅತ್ಯಂತ ಪ್ರೀತಿ, ವಾತ್ಸಲ್ಯ. ಅಪಾರ ಮಮತೆ. ಕಣ್ಣಲ್ಲಿ ಕಣ್ಣಿಟ್ಟು ಸಾಕಿದ ಮಗಳಿಗೂ ಅಪ್ಪ ಅಮ್ಮನ ಮೇಲೆ ಅದೇ ಮಮಕಾರ. ಮಗಳಿಗೆ ಚೆನ್ನಾಗಿ ಓದಿಸಿ ಉತ್ತಮ ಉದ್ಯೋಗವೂ ಸಿಕ್ಕಿತು. ಸೂಕ್ತ ಸಮಯದಲ್ಲಿ ಮದುವೆಯನ್ನೂ ಮಾಡಿದರು. ಮಗಳದು ಸುಖಸಂಸಾರ ಅಲ್ಲೇ ಸಂತೃಪ್ತ ಬದುಕು ಗೋವಿಂದರಾಜು ಕುಟುಂಬದ್ದು.

ಇವೆಲ್ಲವೂ ಕಟ್ಟುಕಥೆಗಳಲ್ಲ. ಇಂದಿನ ಸಮಾಜದಲ್ಲಿ ನಮ್ಮ ಕಣ್ಣಮುಂದೆಯೇ ಕಾಣುತ್ತಿರುವ ವಾಸ್ತವದ ಚಿತ್ರಣ. ಇಂದು ಅದೆಷ್ಟೋ ಕುಟುಂಬಗಳಲ್ಲಿ ವಯಸ್ಸಾದ ತಂದೆತಾಯಿಯರನ್ನು ಮಕ್ಕಳು ಸರಿಯಾಗಿ ನೋಡುತ್ತಿಲ್ಲ. ವೃತ್ತಿಯ ಒತ್ತಡವೋ, ಸಂಗಾತಿ, ಮಕ್ಕಳ ಕಡೆಗಿನ ವಾತ್ಸಲ್ಯವೋ, ಆರ್ಥಿಕ ಅಡಚಣೆಯೋ... ಗೊತ್ತಿಲ್ಲ. ತಮ್ಮ ಪೋಷಕರನ್ನು ಪೋಷಿಸಲು ಹಿಂದೇಟು ಹಾಕುವವರೇ ಹೆಚ್ಚು. ತಂದೆ ತಾಯಿಯರು ತಮಗೆ ಹೊರೆ ಎಂದು ಭಾವಿಸುವ ಮಂದಿಯೇ ಅಧಿಕ. ಹೀಗಾಗಿ ವೃದ್ಧಾಶ್ರಮ, ಅನಾಥಾಶ್ರಮಗಳ ಸಂಖ್ಯೆಯೂ ಹೆಚ್ಚುತ್ತಿದೆ. ಮಕ್ಕಳು ವಿದೇಶದಲ್ಲಿದ್ದರಂತೂ ಹೆತ್ತವರ ಪಾಡು ಯಾರಿಗೂ ಬೇಡ.

ವೃದ್ಧಾಶ್ರಮಗಳಲ್ಲಿ ಕಾಣಿಸುವ ಬಹುತೇಕರು ಅರುಣಾಚಲಂ ಅವರಂಥವರು ಕಂಡುಬಂದರೆ